ಚಾರುವಸಂತ:
ಕಾವ್ಯದಿಂದ ರಂಗಭೂಮಿಯತ್ತ ಒಂದು ಸಾಂಸ್ಕೃತಿಕ ಪಯಣ

ಪಾರ್ವತಿ ಎಂ.*

DOI: https://doi.org/10.5281/zenodo.24338548

ABSTRACT

ರಂಗಭೂಮಿಯು ಕೇವಲ ಮನೋರಂಜನೆಯ ಮಾಧ್ಯಮವಾಗಿರದೆ, ಮಾನವನ ಬದುಕು, ಸಂಸ್ಕೃತಿ ಹಾಗೂ ಸಾಮಾಜಿಕ ಮೌಲ್ಯಗಳನ್ನು ಸಮಾಜಕ್ಕೆ ಪ್ರತಿಬಿಂಬಿಸುವ ಜೀವಂತ ನಿಲುವುಗನ್ನಡಿಯಾಗಿದೆ. ಸಾಹಿತ್ಯ, ಅಭಿನಯ, ಸಂಗೀತ, ನೃತ್ಯ ಹಾಗೂ ತಾಂತ್ರಿಕ ಕಲೆಗಳ ಸಮ್ಮಿಲನದಿಂದ ಮೂಡಿಬರುವ ರಂಗಪ್ರಯೋಗಗಳು ಜನಮನದಲ್ಲಿ ಆಳವಾದ ಪ್ರಭಾವವನ್ನು ಬೀರುತ್ತವೆ. ಲಿಖಿತ ಸಾಹಿತ್ಯ ಕೃತಿಯೊಂದು ರಂಗಪಠ್ಯವಾಗಿ ಬದಲಾಗಿ, ನಿರ್ದೇಶಕ ಹಾಗೂ ಕಲಾವಿದರ ಶ್ರಮದಿಂದ ವೇದಿಕೆಯ ಮೇಲೆ ಜೀವ ತಳೆಯುವುದು ಒಂದು ಅದ್ಭುತ ಕಲಾತ್ಮಕ ಪಯಣ. ಈ ಹಿನ್ನೆಲೆಯಲ್ಲಿ, ನಾಡೋಜ ಡಾ. ಹಂಪಾ ನಾಗರಾಜಯ್ಯನವರು ರಚಿಸಿದ 'ಚಾರುವಸಂತ' ಎಂಬ ದೇಸಿ ಮಹಾಕಾವ್ಯವನ್ನು ಡಾ. ನಾ. ದಾಮೋದರ ಶೆಟ್ಟಿಯವರ ರಂಗರೂಪಾಂತರದಲ್ಲಿ ಮತ್ತು ಡಾ. ಜೀವನ್ ರಾಂ ಸುಳ್ಯ ಅವರ ನಿರ್ದೇಶನದಲ್ಲಿ ರಂಗದ ಮೇಲೆ ತಂದಿರುವುದರ ಸಾಂಸ್ಕೃತಿಕ ಮೌಲ್ಯಗಳ ಮಹತ್ವವನ್ನು ಈ ಲೇಖನ ಸಂಶೋಧನಾ ದೃಷ್ಟಿಯಿಂದ ಅಧ್ಯಯನಕ್ಕೆ ಒಳಪಡಿಸಿದೆ.

KEYWORDS: ರಂಗಪ್ರಯೋಗ, ಹಂಪಾ ನಾಗರಾಜಯ್ಯ, ನಾ. ದಾಮೋದರ ಶೆಟ್ಟಿ, ಡಾ. ಜೀವನ್ ರಾಂ ಸುಳ್ಯ, ಚಾರುದತ್ತ, ವಸಂತತಿಲಕೆ, ಮಿತ್ರಾವತಿ.

* **ಪಾರ್ವತಿ ಎಂ.,** ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ರಂಗಭೂಮಿಯು ಸಮಾಜದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಒಂದು ನಿಲುವುಗನ್ನಡಿ. ರಂಗಭೂಮಿಯು ಅನುಕರಣೆ ಮತ್ತು ಮನೋರಂಜನೆಯನ್ನು ಪ್ರಧಾನ ಆಶಯವನ್ನಾಗಿರಿಸಿಕೊಂಡಿದೆ. ಸಾಹಿತ್ಯ, ಸಂಗೀತ, ಅಭಿನಯ, ನೃತ್ಯ ಮುಂತಾದವುಗಳನ್ನು ಒಳಗೊಂಡ ಮಾಧ್ಯಮವಾಗಿದ್ದು, ಸಮಾಜದ ಚಿತ್ರಣವನ್ನು ಸಹಜವಾಗಿ ಅಭಿವ್ಯಕ್ತಿಸಲು ಪ್ರಯತ್ನಿಸುತ್ತದೆ. ಮನುಷ್ಯನು ಸಂಘ ಜೀವನದತ್ತ ಒಲಿದು ನಾಗರಿಕತೆ ನಿರ್ಮಾಣ ಮಾಡಿಕೊಳ್ಳತೊಡಗಿದಂತೆಲ್ಲ ಮುಖ್ಯವಾಗಿ ಸಂವಹನ ಮಾಧ್ಯಮವಾದ ರಂಗಭೂಮಿಯನ್ನು ನಿತ್ಯದ ಬದುಕಿನಲ್ಲಿ ರೂಢಿಸಿಕೊಂಡನು. ಮನೋರಂಜನೆಯ ಮಾಧ್ಯಮವೆಂದು, ಐಕ್ಯತೆಯನ್ನು ಸಾಧಿಸಲಿಕ್ಕೆಂದು, ವ್ಯವಸ್ಥೆಯನ್ನು ಕಾಪಾಡಲಿಕ್ಕೆಂದು, ಹಾಗೆಯೇ ಎಲ್ಲಾದಕ್ಕೂ ಹೆಚ್ಚಾಗಿ ಜನ ಶಿಕ್ಷಣಕ್ಕೆಂದು ರಂಗಭೂಮಿ ಸ್ಥೂಲವಾಗಿ ಜಾರಿಗೆ ಬಂದಿತು. ಮನುಷ್ಯನ ಆಂತರಿಕ ಆಸೆ, ಆಶಯ, ಆಕಾಂಕ್ಷೆ, ಅನಿಸಿಕೆಗಳು ರಂಗಭೂಮಿ ರೂಪದಲ್ಲಿ ಸಮರ್ಥ ಅಭಿವ್ಯಕ್ತಿ ಸಾಧನಗಳಾದವು. ಸಂಘ ಜೀವನ, ಶ್ರಮವೆಂಬ ವಿಭಜನೆ ಕಾಲಾನುಗತಿಯಲ್ಲಿ ವಿವಿಧ ಸಾಮಾಜಿಕ ನೀತಿಗಳನ್ನು, ಕಟ್ಟುಪಾಡುಗಳನ್ನು ತಂದೊಡ್ಡಿದ್ದರಿಂದ, ಧಾರ್ಮಿಕ ಕ್ರಿಯಾ ವಿಧಾನಗಳು ಬದುಕಿಗೆ ಅನಿವಾರ್ಯವಾಗತೊಡಗಿದ್ದರಿಂದ, ಬಾಹ್ಯವಾದ ವಿಧಿ ವಿಧಾನಗಳು ಬದುಕಿಗೆ ಬೇಕಾಗಿದ್ದರಿಂದ ಈ ರಂಗಕ್ರಿಯೆ ಎನ್ನುವುದು ವ್ಯವಸ್ಥಿತ ರೂಪದಲ್ಲಿ ಮಾರ್ಪಾಡುಹೊಂದಿತು. ರಂಗಭೂಮಿಯಲ್ಲಿ ರಂಗಪ್ರಯೋಗಕ್ಕೆ ವಿಶೇಷವಾದಂತಹ ಸ್ಥಾನವಿದೆ. ರಂಗಪ್ರಯೋಗ ಎಂದರೆ ಸಾಹಿತ್ಯ ಕೃತಿ ಒಂದರ ಗಂಭೀರ ಪ್ರದರ್ಶನ ಎಂದು ಅರ್ಥೈಸಿಕೊಳ್ಳಬಹುದು. ಅಭಿನಯ ಸಿದ್ಧಾಂತ, ರಂಗ ವ್ಯಾಯಾಮ, ರಂಗಧ್ವನಿ, ರಂಗಭಾಷೆ, ರಂಗಮಂದಿರಗಳು, ರಂಗಸಜ್ಜಿಕೆ, ಧ್ವನಿ, ಬೆಳಕು, ವಸ್ತ್ರ ವಿನ್ಯಾಸ, ಪ್ರಸಾದನ, ವೇಷಭೂಷಣ, ಮುಖವಾಡಗಳು, ರಂಗಸಂಗೀತ, ನಿರ್ದೇಶನ, ನಿರ್ವಹಣೆ, ಪ್ರಚಾರಪತ್ರ, ಭಿತ್ತಿಪತ್ರ, ರಂಗಶಿಕ್ಷಣ ಮತ್ತು ರಂಗ ವಿಮರ್ಶೆ ಸೇರಿದಂತೆ ಹತ್ತಾರು ಅಂಶಗಳನ್ನು ತನ್ನೊಡಲಿನಲ್ಲಿ ಇರಿಸಿಕೊಂಡಿದೆ. ಪ್ರಾಚೀನ ಗ್ರೀಕ್ ರಂಗಭೂಮಿಯಿಂದ ಹಿಡಿದು ಇಂದಿನ ಆಧುನಿಕ ರಂಗಭೂಮಿಯವರೆಗೆ ರಂಗ ಪ್ರಯೋಗದಲ್ಲಿ ವಿವಿಧ ರೀತಿಯ ಸ್ಥಿತ್ಯಂತರಗಳಾಗಿವೆ.

ಸಿದ್ಧಾಂತಪರ ಹಿನ್ನೆಲೆ

1. ರಂಗ ರೂಪಾಂತರ ಸಿದ್ಧಾಂತ: ಮಹಾಕಾವ್ಯದಿಂದ ರಂಗಪಠ್ಯ ಮತ್ತು ರಂಗಪ್ರಯೋಗಕ್ಕೆ ನಡೆದ ಪರಿವರ್ತನೆಗೆ ಆಧಾರವಾಗಿರಿಸಬಹುದು.
2. ಅಭಿನಯ ಸಿದ್ಧಾಂತ: ಚಾರುದತ್ತ, ವಸಂತತಿಲಕೆ, ಮಿತ್ರಾವತಿ ಮುಂತಾದ ಪಾತ್ರಗಳ ಭಾವಾಭಿವ್ಯಕ್ತಿಯನ್ನು ಕಂಡುಕೊಳ್ಳಲು ಸಹಾಯಕಾರಿ.
3. ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನ: ಜಾತಿ, ಸಾಮಾಜಿಕ ಸಮಾನತೆ, ಮಾನವೀಯ ಮೌಲ್ಯಗಳು ಮತ್ತು ಕೌಟುಂಬಿಕ ಸಂಬಂಧಗಳ ಬಗ್ಗೆ ಅರಿಯಲು.

ರಂಗಪ್ರಯೋಗ:

ಸಾಹಿತ್ಯ ಕೃತಿಯೊಂದರ ಗಂಭೀರ ಪ್ರದರ್ಶನವಾದ ರಂಗಪ್ರಯೋಗವು

ಎರಡು ಬಗೆಯ ಸಾಹಿತ್ಯ ಕೃತಿಗಳನ್ನು ಆಧರಿಸಿ ಪ್ರಯೋಗಗೊಳ್ಳುತ್ತದೆ. ಒಂದು ರಂಗ ಪ್ರಯೋಗಕ್ಕೆಂದೇ ಸಿದ್ದಗೊಂಡ ರಂಗಕೃತಿಗಳ ಮೂಲಕ, ಮತ್ತೊಂದು ರಂಗ ಪ್ರಯೋಗದ ಉದ್ದೇಶದಿಂದ ಬರೆಯಲ್ಪಡದ ಆದರೆ ಆನಂತರದಲ್ಲಿ ರಂಗ ಪ್ರಯೋಗಕ್ಕೆ ಒಳಪಟ್ಟ ಇತರೆ ಸಾಹಿತ್ಯ ಪ್ರಕಾರಗಳಿಗೆ ಸೇರಿದ ಕೃತಿಗಳ ಮೂಲಕ. ರಂಗಪ್ರಯೋಗಕ್ಕೆಂದೇ ಸಿದ್ದಗೊಂಡ ರಂಗಕೃತಿ ಅಥವಾ ರಂಗಪಠ್ಯಗಳು ನಿರ್ದೇಶಕನ ದೃಷ್ಟಿಕೋನಕ್ಕೆ ಅನುಗುಣವಾಗಿ, ಪಾತ್ರಗಳ ನಿರ್ವಹಣೆಗೆ ತಕ್ಕಂತೆ ಪ್ರಯೋಗದಿಂದ ಪ್ರಯೋಗಕ್ಕೆ ಬದಲಾವಣೆಗಳನ್ನು ಪಡೆಯುತ್ತಾ ಹೋಗುತ್ತವೆ. ರಂಗಕೃತಿಯು ಒಂದೊಂದು ಪ್ರಯೋಗದ ಮೂಲಕ ಪ್ರೇಕ್ಷಕನ ಮೇಲೆ ಉಂಟುಮಾಡುವ ಪರಿಣಾಮವು ಭಿನ್ನವಾಗಿರುತ್ತದೆ. ಅಂದರೆ ಪ್ರದರ್ಶನದಲ್ಲಿ ಮತ್ತು ಪರಿಣಾಮದ ಸ್ವರೂಪದಲ್ಲಿ ರೂಪಾಂತರಗಳನ್ನು ಆಗಿಂದಾಗ್ಗೆ ಪಡೆಯುತ್ತಿರುತ್ತದೆ. ಅಂತಹ ರಂಗ ಪ್ರಯೋಗಗಳಲ್ಲಿ ವಿಶಿಷ್ಟವಾದ ರಂಗ ಪ್ರಯೋಗವೆಂದರೆ ಚಾರುವಸಂತ. ನಾಡೋಜ ಡಾ. ಹಂಪಾ ನಾಗರಾಜಯ್ಯನವರು ಬರೆದಿರುವ ದೇಸಿ ಮಹಾಕಾವ್ಯ ಚಾರುವಸಂತ. ನಮ್ಮ ದೇಶದ ಪ್ರಾಚೀನ ಕಥಾ ಪರಂಪರೆಯಲ್ಲಿ ಚಾರುದತ್ತನ ಕಥೆಗೆ ವಿಶಿಷ್ಟ ಸ್ಥಾನಮಾನ ಸಂದಿದೆ. ಕ್ರಿಸ್ತಪೂರ್ವದಿಂದ ತೊಡಗಿ ಜೈನ– ಅಜೈನ ಎಂಬ ಭೇದಭಾವವಿಲ್ಲದೆ ಈ ಕಥೆಯನ್ನು ಪ್ರೇರಣೆಯಾಗಿಟ್ಟುಕೊಂಡು ಕಾವ್ಯ ರಚಿಸಿದವರು ಹಲವರು. ಶೃಂಗಾರ ಮತ್ತು ಸಾಹಸ ಪ್ರಧಾನವಾದ ಈ ಕಥೆಯನ್ನು ಕವಿ ಡಾ. ಹಂಪಾ ನಾಗರಾಜಯ್ಯನವರು ಐದು ಕಾಂಡಗಳಲ್ಲಿ ಕನ್ನಡದ ಓದುಗರಿಗೆ ದೇಸಿ ಮಹಾಕಾವ್ಯದ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಚಾರುವಸಂತ ದೇಸಿ ಮಹಾಕಾವ್ಯವು ಭಾರತೀಯ ಹದಿನಾರು ಭಾಷೆಗಳಲ್ಲಿ ಅನುವಾದಗೊಂಡಿರುವುದು ಕನ್ನಡ ಸಾಹಿತ್ಯವನ್ನು ಇತರ ಭಾಷಿಕರು ಒಪ್ಪಿ ಅಪ್ಪಿಕೊಂಡ ಪರಿಯನ್ನು ತಿಳಿಸುತ್ತದೆ. ಪ್ರಾಚೀನ ಕಥಾನಕವನ್ನು ದೇಸಿ ಶೈಲಿಯಲ್ಲಿ ಬರೆದು 2023ರಲ್ಲಿ ಲೋಕಾರ್ಪಣೆ ಮಾಡಿದ್ದ ಹಂಪನಾ ಅವರಿಗೆ ಚಾರುದತ್ತ ಮಹಾಕಾವ್ಯವು ರಂಗಪ್ರಯೋಗವಾಗಿ ಜನ ಸಮೂಹವನ್ನು ತಲುಪಲಿ ಎಂಬ ಹೆಬ್ಬಯಕೆ ಇದ್ದಿತು. ಅವರ ಹೆಬ್ಬಯಕೆಯನ್ನು ಹೆಗಲಿಗೇರಿಸಿಕೊಂಡು ಚಾರುವಸಂತ ಮಹಾಕಾವ್ಯವನ್ನು ರಂಗರೂಪಕ್ಕೆ ಇಳಿಸಿದವರು ಡಾ. ನಾ. ದಾಮೋದರ ಶೆಟ್ಟಿ. ಚಾರುವಸಂತ ರಂಗರೂಪಕ್ಕೆ ಇಂಬು ಕೊಟ್ಟು ರಂಗಕ್ಕೆ ಅಳವಡಿಸಿದವರು ನಾಡಿನ ಪ್ರಸಿದ್ಧ ಹಾಗೂ ಸೃಜನಶೀಲ ರಂಗ ನಿರ್ದೇಶಕರಾದಂತಹ ಡಾ. ಜೀವನ್ ರಾಂ ಸುಳ್ಯ.

ಮಲಹೊರುವ ಪದ್ಧತಿ – ವಿಚಾರದ ಸಾಮಾಜಿಕ ಅರಿವು

ಪ್ರೀತಿ ಮಧುರ ತ್ಯಾಗ ಅಮರ ಎಂಬ ನಾಣ್ನುಡಿಯಂತೆ ಚಾರುದತ್ತ ಮತ್ತು ವಸಂತತಿಲಕೆಯ ನಿಷ್ಕಲ್ಮಶ ಪ್ರೀತಿ ಹಾಗೂ ಸಾಧ್ವಿ ಶಿರೋಮಣಿ ಮಿತ್ರಾವತಿಯ ತ್ಯಾಗವೇ ಈ ಕಾವ್ಯದ ಮುಖ್ಯ ಆಶಯ. ಗುಣಾಢ್ಯನ ಬೃಹತ್ಕಥೆ, ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ಬರೆದ ಹರಿವಂಶ, ಕನ್ನಡದ ಆದಿ ಗುಣವರ್ಮ, ಕರ್ಣಪಾರ್ಯ, ಬಂಧುವರ್ಮ, ನಾಗರಾಜ, ಮಂಗರಸರ ಮೊದಲಾದವರು ತಮ್ಮ ತಮ್ಮ ಕಾವ್ಯಗಳಲ್ಲಿ ಚಾರುದತ್ತ ಮತ್ತು ವಸಂತತಿಲಕೆಯ ಕಥೆಗಳನ್ನು ವಿವಿಧ ರೂಪದಲ್ಲಿ ನಿರೂಪಿಸಿದ್ದಾರೆ.

ಮಹಾಕಾವ್ಯ ರಚಿಸಿದ ಕವಿಗೆ ನಮನವಿಟ್ಟು ಆರಂಭಿಸುವ ಈ ರಂಗ ಪ್ರಯೋಗ ಆರಂಭವಾಗುವುದು ಚಂಪಾಪುರದಲ್ಲಿ. ಇಲ್ಲಿನ ಧನಿಕ ವ್ಯಾಪಾರಿಯಾದಂತಹ ಭಾನುದತ್ತನು ಬಹಳ ಉದಾರಿಯಾಗಿದ್ದನು. ಈತನ ಮಡದಿ ದೇವಿಲೆ ಬಂಜೆತನದ ನಿಂದನೆಯನ್ನು ಅನುಭವಿಸುತ್ತಿರಲು, ಊರ ಹೊರಗೆ ಚಾರಣ ಮುನಿಗಳು ಬಂದ ವಿಷಯವನ್ನು ಕೇಳಿ ಅವರನ್ನು ಭೇಟಿ ಮಾಡಲು ಹೊರಟಾಗ ಮಲ ಹೊತ್ತು ಕಾರ್ಮಿಕರು ಸಾಗುತ್ತಿರುವುದನ್ನು ಕಂಡ ಭಾನುದತ್ತ, ಇನ್ನು ಮುಂದೆ ನಮ್ಮ ಚಂಪಾ ನಗರಿಯಲ್ಲಿ ಈ ಹೇಯಕೃತ್ಯ ನಡೆಯಬಾರದು ಎಂದು ಆದೇಶ ನೀಡುತ್ತಾನೆ. ಮಲಹೊರುವ ಪದ್ಧತಿಯು ಮನುಷ್ಯ ಮನುಷ್ಯನನ್ನೇ ದಾನವನನ್ನಾಗಿ ಚಿತ್ರಿಸಿದ ಪರಿಯನ್ನು ತಿಳಿಯಪಡಿಸುತ್ತದೆ. "ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ?" ಎಂಬ ಮಾತಿನಂತೆ ಮನುಷ್ಯನ ಮೌಲ್ಯವನ್ನು ಜಾತಿಯಿಂದಲ್ಲ, ಅವನ ಗುಣ ಮತ್ತು ನಡೆ-ನುಡಿಯಿಂದ ಅಳೆಯಬೇಕು ಎಂಬ ಸಜ್ಜನಿಕೆ ಭಾನುದತ್ತನಿಗೆ ತಿಳಿದಿತ್ತೆನಿಸುತ್ತದೆ. ಆರೋಗ್ಯಕ್ಕೆ ಹಾನಿಕಾರಿಯಾಗಿರುವ, ಮಾನವ ಘನತೆಯನ್ನು ಹಾಳು ಮಾಡುವ, ಜಾತಿ ಆಧಾರಿತ ಸಾಮಾಜಿಕ ಅಸಮಾನತೆಯ ಐತಿಹಾಸಿಕ ಪದ್ಧತಿಯನ್ನು ವಿಮೋಚಿಸಿದ ಕೀರ್ತಿ ಭಾನುದತ್ತನದು. ರಂಗ ಪ್ರಯೋಗದ ಮೊದಲನೆಯ ದೃಶ್ಯವೇ ಈ ರೀತಿಯ ಸಾಮಾಜಿಕ ಪರಿವರ್ತನೆಯನ್ನು ಒಳಗೊಂಡಿರುವುದು ಪ್ರೇಕ್ಷಕರನ್ನು ಜಾತೀಯತೆ ಎಂಬ ಮೌಢ್ಯಗಳಿಂದ ಹೊರ ಬರುವಂತೆ ನೀಡುವ ಸಂದೇಶದಂತಿದೆ.

ಉದಾತ್ತ ಚಾರುದತ್ತ

ಚಾರಣ ಮುನಿಗಳ ಬಳಿ ಬಂದ ಭಾನು-ದೇವಿಲೆಯರು ತಮ್ಮ ಅಳಲನ್ನು ತೋಡಿಕೊಂಡಾಗ "ನಿನಗೊಬ್ಬ ಅಸಮಾನ್ಯ ಉದಾರ ಚರಿತ ಮಗ ಹುಟ್ಟುವನು" ಎಂಬ ವರವನ್ನು ಪಡೆದು ತಮ್ಮರಮನೆಗೆ ಹಿಂದಿರುಗಿದರು. ವರ್ಷ ತುಂಬುವುದರೊಳಗೆ ಚಾರುದತ್ತ ಇವರ ಮಡಿಲಿನಲ್ಲಿ ನಲಿಯುತ್ತಿದ್ದನು. ವ್ಯಾಪಾರಿಯೊಬ್ಬ ಅರಮನೆಯಲ್ಲಿದ್ದನು ಎಂಬ ರೂಪಕವು ಸಾಮಾನ್ಯರಿಗೂ ಅರಮನೆಯಲ್ಲಿ ಜೀವಿಸುವುದು ಸಾಧ್ಯ ಎಂಬ ಕನಸನ್ನು ಕವಿ ಪೋಣಿಸಿದಂತಿದೆ. ಕಾವ್ಯ ರಂಗಪಠ್ಯವಾಗಿ, ರಂಗ ಪ್ರಯೋಗವಾಗುವಾಗ ಎದುರಾಗುವ ಸವಾಲುಗಳು ಸಹಸ್ರಾರು. ಅರಮನೆಯನ್ನು ರಂಗದ ಮೇಲೆ ತರುವುದು ಅಷ್ಟು ಸುಲಭದ ಕೆಲಸವೇನಲ್ಲ. ಯಥಾವತ್ತಾದ ಅರಮನೆಯನ್ನು ರಂಗದ ಮೇಲೆ ತರಲು ಸಾಧ್ಯವಿಲ್ಲದಿದ್ದರೂ, ನಿರ್ದೇಶಕನ ಭಾವ ಭಿತ್ತಿಯಲ್ಲಿ ಅರಳಿದ ಸರಳ ಸುಂದರ ಅರಮನೆಯ ಪ್ರತಿಕೃತಿ ವೇದಿಕೆಯ ಮೇಲೆ ನಿರ್ಮಾಣವಾಗಿತ್ತು. ಕತ್ತಲೆ ಬೆಳಕಿನ ವಿನ್ಯಾಸದ ನಡುವೆ ಕಲಾವಿದರುಗಳು ರಂಗ ಪರಿಕರಗಳನ್ನು ಬದಲಿಸುವ ರೀತಿ ಅಮೋಘವಾಗಿತ್ತು. ಸಂತಾನವಿಲ್ಲದ ಅರಮನೆಯಲ್ಲೀಗ ಸಡಗರದ ಸಂಭ್ರಮ. ಇಭ್ಯ ವಂಶದ ಕುಡಿ, ವೈಶ್ಯ ಕುಲ ಲಲಾಮನಾದ ಚಾರುದತ್ತ ನೋಡ ನೋಡುತ್ತಿದ್ದಂತೆ ಬೆಳೆಯುತ್ತಾ, ಆ ವಿದ್ಯೆ, ಈ ವಿದ್ಯೆ, ಸಕಲ ವಿದ್ಯೆಯ ಕಲಿತ, ಗುರುವಿದ್ಯೆ, ಗುರಿ ವಿದ್ಯೆಯ ಪಾರಂಗತನಾದನು. ಹರಿಮುಖ, ಗೋಮುಖ, ವಾರಾಹಕ, ಮರುಭೂತಿ, ಪರಂತಪರೆಂಬ ಕೆಳೆಯರೊಡನೆ ಕೇಕೆ ಹಾಕುತ್ತಾ ಕಾಡಿನ ಸಂಚಾರಕ್ಕೆ ತೆರಳುತ್ತಾರೆ.

ಕಾಡಿನ ಗಿಡ–ಮರಗಳಿಗೆ ಹಾನಿ ಮಾಡಿ, ಪ್ರಾಣಿ ಪಕ್ಷಿಗಳಿಗೆ ತೊಂದರೆ ನೀಡುತ್ತಿದ್ದ ಗೆಳೆಯರಿಗೆ ಸಸ್ಯ ಶ್ಯಾಮಲೆಯ ಮಹತ್ವ ಹಾಗೂ ಜೀವ ಸಂಕುಲಗಳ ಮೇಲೆ ಕನಿಕರವಿರಲಿ ಎಂದು ಎಚ್ಚರಿಸುತ್ತಾನೆ. ಈ ಸಂದರ್ಭವು

ದಯವೇ ಧರ್ಮದ ಮೂಲವಯ್ಯ
ದಯವಿಲ್ಲದ ಧರ್ಮವದಾವುದಯ್ಯ?
ದಯವೇ ಬೇಕು ಸಕಲ ಪ್ರಾಣಿಗಳಲ್ಲಿ
ಕೂಡಲಸಂಗಮದೇವಾ

ಎಂಬ ವಚನಕ್ಕೆ ಸಾಕ್ಷಿಯಾದಂತಿದೆ. ಹೀಗೆ ಕಾಡಿನಲ್ಲಿ ಮುಂದೆ ಸಾಗುತ್ತಿರುವಾಗ ಕದಂಬ ವೃಕ್ಷಕ್ಕೆ ಕೀಲಿಸಿದ ಖೇಚರನೊರ್ವನನ್ನು ಚಾರುದತ್ತನು ಕೀಲೋತ್ಪಾಟಿ, ಉನ್ಮೂಲ, ವ್ರಣರೋಹಿ ಮತ್ತು ಸಂಜೀವಿನಿ ಮಾತ್ರೆ ನೀಡುವುದರ ಮೂಲಕ ಮರುಜನ್ಮವನ್ನೀಯುತ್ತಾನೆ. ಚಾರುವಿನ ಈ ಅಸಾಧಾರಣ ಪ್ರತಿಭೆಯನ್ನು ಕಂಡು ಸ್ನೇಹಿತರು ಪುಲಕಿತರಾಗುತ್ತಾರೆ. ಇತ್ತ ಬಂಧಮುಕ್ತನಾದ ಖೇಚರ ತನ್ನ ಬದುಕಿನ ವೃತ್ತಾಂತದ ಸಂಕ್ಷಿಪ್ತ ಚಿತ್ರಣವನ್ನು ಇತ್ತು, ನನ್ನ ಹೆಂಡತಿಯನ್ನು ಕಾಪಾಡಲೇಬೇಕು, ಮುಂದೊಮ್ಮೆ ನಿನಗೆ ಸಹಾಯ ಮಾಡುತ್ತೇನೆ, ನೀನು ಮಾಡಿದ ಉಪಕಾರವನ್ನು ನಾನೆಂದೂ ಮರೆಯಲಾರೆ ಎಂದು ಹೇಳಿ ತೆರಳುವನು.

ತ್ಯಾಗಮಯಿ ಮಿತ್ರಾವತಿ

ಪ್ರಾಯಕ್ಕೆ ಬಂದ ಚಾರುವಿಗೆ ಮದುವೆ ಮಾಡಿಸಬೇಕೆಂಬ ಬಯಕೆ ಭಾನುದತ್ತ ಮತ್ತು ದೇವಿಲೆಗೆ ಕಾಡತೊಡಗಿತು. ಕುಂತಳ ನಾಡಿನ ವರ್ತಕ ಹಾಗೂ ವಾಣಿಜ್ಯ ವಹಿವಾಟಿನ ಮೂಲಪುರುಷನಾದ ಭಾನುದತ್ತನ ತಂಗಿ ಸುಮಿತ್ರೆ– ಸಿದ್ಧಾರ್ಥನ ಏಕೈಕ ಮಗಳಾದ ಮಿತ್ರಾವತಿಯೊಂದಿಗೆ ಸಕಲ ಶಾಸ್ತ್ರ, ವಾದ್ಯ ಘೋಷ, ಮಂತ್ರ ಘೋಷಗಳೊಂದಿಗೆ ಸಂಪದ್ಭರಿತವಾದ ವಿವಾಹ ಮಹೋತ್ಸವ ಭೋಜನ, ತಾಂಬೂಲಾದಿಗಳೊಂದಿಗೆ ನೆರವೇರಿತು. ಸದಾ ಓದುವುದರಲ್ಲಿ ನಿರತನಾಗಿದ್ದ ಚಾರುವಿಗೆ ನವ ಮದುವಣಗಿತ್ತಿಯಾದ ಮಿತ್ರಾವತಿಯ ಸೌಂದರ್ಯ ಕಾಣಲೇ ಇಲ್ಲ. ದಿನಗಳು ಉರುಳುತ್ತಲೇ ಇದ್ದರೂ ಸತಿಯ ಸಮೀಪಕ್ಕೆ ಬಾರದಿಹ ಚಾರುವಿನ ವಿಷಯ ತಿಳಿದ ಜನ "ಇದೆಂಥ ಓದಿನ ಗೀಳು ಚಾರುದತ್ತನಿಗೆ, ಹೆಂಡತಿ ಬಳಿಯಲ್ಲಿದ್ದು ರತಿಯ ಅರಸಿಕಗೆ ಪುಸ್ತಕವೇ ಗತಿಯಾಯ್ತೇ?" ಎಂದು ಮೂದಲಿಸತೊಡಗಿದರು. ತನ್ನ ಲೌಕಿಕ ಬದುಕಿನ ಸತ್ಯ ಅಸತ್ಯಗಳನ್ನು ಯಾರೊಂದಿಗೂ ಹಂಚಿಕೊಳ್ಳದ ಮಿತ್ರಾವತಿ ತಾಯಿಯಾದ ಸುಮಿತ್ರೆಯ ಬಳಿ ತನ್ನ ಅಳಲನ್ನು ತೋಡಿಕೊಳ್ಳುವ ಸನ್ನಿವೇಶ ಕುಂತಿ ಮತ್ತು ಮಾದ್ರಿಯನ್ನು ನೆನಪಿಸುತ್ತದೆ. ಮದುವೆಯಾದರೂ ಕನ್ಯೆಯಾಗಿ ಉಳಿದಿರುವ ವಿಚಾರ ತಿಳಿದ ಸುಮಿತ್ರೆಯು ದೇವಿಲೆಯೊಂದಿಗೆ ದೊಡ್ಡ ರಂಪಾಟವನ್ನೇ ಮಾಡುತ್ತಾಳೆ. ಮಗ ಪುಸ್ತಕದ ಗೀಳನ್ನು ಬಿಟ್ಟು ಮೊಮ್ಮಕ್ಕಳನ್ನು ನೀಡುತ್ತಾನೆ ಚಿಂತಿಸದಿರು ಎಂದು ಸುಮಿತ್ರೆಯನ್ನು ಸಂತೈಸಿದ ದೇವಿಲೆಯು ತನ್ನ ಮಗನ ಮನ ಪರಿವರ್ತನೆಯ ಹಾದಿಯನ್ನು ಹುಡುಕಲು ಮುಂದಾಗುತ್ತಾಳೆ. ತನ್ನ

ಸಹೋದರನಾದ ರುದ್ರದತ್ತ ಎಷ್ಟೇ ಕೆಟ್ಟವನಾದರೂ ಚಾರುವಿನಲ್ಲಿ ಇಂದ್ರಿಯಾಸಕ್ತಿಯನ್ನು ಮೂಡಿಸುವ ನಿಸ್ಸೀಮನೆಂದು ಭಾವಿಸಿ ಚಂಪಾ ನಗರಿಗೆ ಆತನನ್ನು ಬರ ಮಾಡಿಕೊಳ್ಳುತ್ತಾಳೆ. ಅಕ್ಕನಿಂದ ವಿಷಯ ತಿಳಿದ ಮೇಲೆ ರುದ್ರದತ್ತನು ಚಾರುವಿನ ಬಳಿ ವಿದ್ಯೆ ಕಲಿಯುವ ನಾಟಕವನ್ನು ಆಡಿ ಚಾರುವಿನ ಸ್ನೇಹಕ್ಕೆ ಹತ್ತಿರವಾಗುತ್ತಾನೆ. ಆಗಮ ವಿದ್ಯೆಗಳನ್ನೆಲ್ಲ ನಿನ್ನಿಂದ ಕೇಳಿ ಪಡೆದಿದ್ದೇನೆ ಚಾರು. ರಸವಿದ್ಯೆ, ಚೋರವಿದ್ಯೆ, ಕಾಮವಿದ್ಯೆಯನ್ನು ನನ್ನಿಂದ ಕೇಳಿ ತಿಳಿ ಎಂಬಿತ್ಯಾದಿ ಬಣ್ಣದ ಮಾತುಗಳನ್ನಾಡುತ್ತಾ ಆತನನ್ನು ವೇಶ್ಯಾನಗರಿಗೆ ಕರೆದೊಯ್ಯುತ್ತಾನೆ. ವೇಶ್ಯಾನಗರದ ಶೃಂಗಾರ, ಸಂಗೀತಕ್ಕೆ ಮನಸೋತ ಚಾರು ಪುಸ್ತಕವನ್ನು ಬಿಟ್ಟು ಕಚ್ಚೆ ಪೀತಾಂಬರವನ್ನು ಉಟ್ಟು ದೇವದಾಸಿಯರ ನರ್ತನವನ್ನು ನೋಡುವುದರಲ್ಲಿ ಮಗ್ನನಾದನು. ಆಗಷ್ಟೇ ಗೆಜ್ಜೆಪೂಜೆ ಮಾಡಿಸಿಕೊಂಡಿದ್ದ ಅನಾಮಿಕೆಯ ಮಗಳು ವಸಂತತಿಲಕೆಯನ್ನು ಚಾರುವಿಗೆ ಪರಿಚಯಿಸಿ, ನೀವಿಬ್ಬರೂ ಪಗಡೆಯಾಡಿ ಎಂದ ರುದ್ರದತ್ತನ ಮಾತಿಗೆ ಅನಾಮಿಕೆಯು ಇಂಬು ನೀಡಿದಳು. ಪಗಡೆಯ ಸೋಲು ಗೆಲುವಿನ ಆಟದ ನಡುವೆ ಶೃಂಗಾರದ ಪಗಡೆಯಾಟದಲ್ಲಿ ಚಾರುದತ್ತ ಹಾಗು ವಸಂತತಿಲಕೆ ಒಂದಾದರು. ಓದುವುದರಲ್ಲಿ ಮಗ್ನನಾಗಿದ್ದ ಚಾರು ಈಗ ವೇಶ್ಯಾನಗರಿಯ ವ್ಯಸನಿಯಾಗಿದ್ದ.

ಪ್ರೇಮ ಸ್ವರೂಪಿಣಿ ವಸಂತತಿಲಕೆ

ಚಾರುದತ್ತ ಮತ್ತು ವಸಂತತಿಲಕೆ ಹಾರುವ ಹಕ್ಕಿಗಳಂತೆ, ಈಜುವ ಮೀನುಗಳಂತೆ, ತೇಲುವ ಕಮಲಗಳಂತಾದರು. ಇದನ್ನು ನೆಪ ಮಾಡಿಕೊಂಡ ಅನಾಮಿಕೆ ಚಾರುವಿನ ಅರಮನೆಯಿಂದ ಹಣ ಒಡವೆಗಳನ್ನು ತರಿಸಿಕೊಳ್ಳಲು ಆರಂಭಿಸಿದಳು. ತಿಂಗಳಿಗೊಮ್ಮೆಯಿಂದ ಆರಂಭಿಸಿ ವಾರ, ದಿನಂಪ್ರತಿ ಹಣವನ್ನು ತರುವಂತೆ ಚಾರಪರಿಚಾರಿಕೆಯರ ತಂಡವನ್ನು ನಿಯೋಜಿಸಿದಳು. ಮಗನ ಸಂತಸಕ್ಕಾಗಿ ದೇವಿಲೆ ಹೊನ್ನಿನ ಮಳೆಯನ್ನೇ ವೇಶ್ಯಾನಗರಕ್ಕಟ್ಟಿದಳು. ಅನಾಮಿಕೆಯ ಮನೆಯಲ್ಲಿ ಚಾರುದತ್ತ ಹಾಗೂ ವಸಂತತಿಲಕೆ ಪ್ರೇಮ ಪೂಜೆಯಲ್ಲಿ ತೊಡಗಿಕೊಂಡಿದ್ದರು. ಪ್ರೀತಿ –ಪ್ರೇಮಕ್ಕೂ, ಕಾಮ–ಮೋಹಕ್ಕೂ ವ್ಯತ್ಯಾಸವಿದೆ. ಉದಾಹರಣೆಗೆ ಜನ್ನನ ಯಶೋಧರ ಚರಿತೆಯಲ್ಲಿನ ಅಮೃತಮತಿಗೆ ಅಷ್ಟಾವಕ್ರನಲ್ಲಿದ್ದದ್ದು ಪ್ರೀತಿ ಪ್ರೇಮವಾದರೆ, ನಾಗಚಂದ್ರನ ಅನಂತನಾಥ ಪುರಾಣದಲ್ಲಿನ ಚಂಡಶಾಸನನಿಗೆ ಸುನಂದೆಯ ಮೇಲಿದ್ದದ್ದು ಕಾಮ ಹಾಗೂ ಮೋಹ. ಚಾರುದತ್ತ ಹಾಗೂ ವಸಂತತಿಲಕೆ ಕಾಮಮೋಹಕ್ಕೊಳಗಾಗದೆ, ತಿಳಿಯಾದ ಪ್ರೇಮದಲ್ಲಿ ತನ್ಮಯರಾಗಿದ್ದರು. ಇತ್ತ ತಿಂಗಳುಗಳೇ ಕಳೆದಿದ್ದರೂ, ಮಗ ಮನೆಗೆ ಬಾರದಿದ್ದನ್ನು ಕಂಡು, ವೈಶ್ಯನೊಬ್ಬ ವೇಶ್ಯೆಯ ಮನೆಯ ವ್ಯಸನಿಯಾದದ್ದನ್ನು ಸಹಿಸಲಾರದೆ, ಭಾನುದತ್ತ ಗೌರವಹೀನನಾಗಿ ಬಾಳಲು ಸಾಧ್ಯವಾಗದೆ, ಸನ್ಯಾಸತ್ವ ಸ್ವೀಕರಿಸಿ ದೇಶಾಂತರ ಹೊರಟು ಹೋದನು. ದೇವಿಲೆ ಹಾಗೂ ಮಿತ್ರಾವತಿ ಇದ್ದಬದ್ದ ಹಣ ಒಡವೆಗಳನ್ನೆಲ್ಲ ಕಳೆದುಕೊಂಡು ಇದ್ದೊಂದು ಅರಮನೆಯನ್ನು ಮಾರಿ ಎಲೆ ಹುಲ್ಲುಗರಿ ಹೊದಿಸಿದ ಪುಟ್ಟ ಮನೆಯನ್ನು ಕಟ್ಟಿ, ಕಾಲವನ್ನು ಸವೆಸಲು ಮುಂದಾದರು.

ಚಾರುವಿನ ಕುಟುಂಬ ದಿವಾಳಿಯಾದ ವಿಚಾರ ತಿಳಿದ ಅನಾಮಿಕೆ ತನ್ನ ಮಗಳಾದ ವಸಂತತಿಲಕೆಯನ್ನು ಕರೆದು ಈಗಿಂದೀಗಲೇ ಚಾರುವನ್ನು ಮನೆಯಿಂದ ಹೊರಗಟ್ಟಲು ಸೂಚಿಸುತ್ತಾಳೆ. ಅಮ್ಮನ ಮಾತಿಗೆ ಕುಪಿತಗೊಂಡ ವಸಂತತಿಲಕೆ

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ
ಚೆಲುವಂಗೆ ನಾನೊಲಿದೆ.
ಎಡೆಯಿಲ್ಲದ ಕಡೆಯಿಲ್ಲದ ತೆರೆಯಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲ್ಲ ಅವ್ವಗಳಿರಾ!
ಭವವಿಲ್ಲದ ಭಯವಿಲ್ಲದ
ನಿರ್ಭಯ ಚೆಲುವಂಗೊಲಿದೆ ನಾನು.
ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು.
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿದ ಎಲೆ ಅವ್ವಗಳಿರಾ!!

ಎಂಬ ಅಕ್ಕನ ವಚನದಂತೆ "ಚಾರುದತ್ತನೆನ್ನ ಪ್ರಾಣವಲ್ಲಭ ಬದುಕಿಗೆ. ಮಿಂಡನಲ್ಲನವ ಗಂಡನೈ ನನಗೆ" ಎಂಬ ಪ್ರತ್ಯುತ್ತರ ನೀಡುತ್ತಾಳೆ. ಈ ಮಾತುಗಳು ವಸಂತಗೆ ಚಾರುವಿನ ಮೇಲಿದ್ದ ಅಗಾಧವಾದ ಪ್ರೀತಿ ಹಾಗೂ ವೇಶ್ಯಾವೃತ್ತಿಯ ಮೇಲಿದ್ದ ಜುಗುಪ್ಸೆಯನ್ನು ಸೂಚಿಸುತ್ತದೆ. ಪ್ರೀತಿ ಹೇಗೆ, ಯಾವಾಗ, ಯಾರ ಮೇಲೆ, ಯಾವ ರೂಪದಲ್ಲಿ ಸಂಭವಿಸುತ್ತದೆ ಎಂದು ಹೇಳುವುದು ಅಸಾಧ್ಯ? ಪೊಲ್ಲಮೆಯೇ ಲೇಸು ನಲ್ಲರ ಮೈಯೊಳ್ ಎಂಬ ಜನ್ನನ ಮಾತಿನಂತೆ ಈಗಾಗಲೇ ಮದುವೆಯಾಗಿದ್ದ ಚಾರುವಿನ ಮೇಲೆ ವಸಂತತಿಲಕೆ ಪ್ರಾಣವನ್ನೇ ಇಟ್ಟಿದ್ದಳು. ರಂಗದ ಮೇಲಿನ ಈ ದೃಶ್ಯವು ಮಾನವನ ಮನಸ್ಸಿನ ಒಳಸುಳಿಗಳನ್ನು ಹಾಗೂ ಸಂಬಂಧಗಳ ಸಂಕೀರ್ಣತೆಯನ್ನು ವಾಸ್ತವಿಕವಾಗಿ ಮತ್ತು ಭಾವನಾತ್ಮಕವಾಗಿ ಚಿತ್ರಿಸಿದೆ.

ಚಾರು– ವಸಂತ: ನಿಜ ಪ್ರೀತಿಗೆ ಸಂದ ಜಯ

ವಸಂತತಿಲಕೆಯ ಮಾತುಗಳಿಂದ ಸಿಟ್ಟಾದ ಅನಾಮಿಕೆಯು ನಾಲ್ಕು ಜನ ದಾಂಡಿಗರ ಸಹಾಯದಿಂದ ಚಾರುದತ್ತನನ್ನು ರಾತ್ರೋರಾತ್ರಿ ಮನೆಯಿಂದ ಹೊರ ಹಾಕುತ್ತಾಳೆ. ಇದರಿಂದ ವಸಂತತಿಲಕೆಯು ತೀವ್ರ ಆಘಾತಕ್ಕೊಳಗಾಗಿ ಹುಚ್ಚಿಯಂತೆ ಅಳಲಾರಂಭಿಸುತ್ತಾಳೆ. ತಿಪ್ಪೆಯ ಮೇಲೆ ಬಿದ್ದಿದ್ದ ಚಾರುವಿಗೆ ಎಚ್ಚರವಾದಾಗ ತಾನು ಮಾಡಿದ ತಪ್ಪಿನ ಅರಿವಾಗುತ್ತದೆ. ಒಲ್ಲದ ಮನಸ್ಸಿನಿಂದ ತನ್ನ ಅರಮನೆಯತ್ತ ಮುಖ ಮಾಡುತ್ತಾನೆ. ಆದರೆ ಅರಮನೆ ಬೇರೆಯವರ ತೊತ್ತಾಗಿರುತ್ತದೆ. ತನ್ನಿಂದಾಗಿ ಕುಟುಂಬಕ್ಕೆ ಒದಗಿದ ದುರ್ಗತಿಯನ್ನು ನೆನೆದು ಚಾರು ಪಶ್ಚಾತಾಪದ ಕಣ್ಣೀರನ್ನು ಹರಿಸುತ್ತಾನೆ. ದೇವಿಲೆ ಹಾಗೂ ಮಿತ್ರಾವತಿಯ ಮುಂದೆ ಮಂಡಿಯೂರಿ ಕ್ಷಮೆಯಾಚಿಸುತ್ತಾನೆ. ಮಿತ್ರಾ, ವಸಂತಳ ಹೊರತು ಮಿಕ್ಕ ನಾರಿಯರು ಎನಗೆ ಅಕ್ಕ ತಂಗಿಯರು ನಂಬು ನನ್ನನ್ನು ಎಂದು ಮಿತ್ರಾವತಿಯನ್ನು ಸಂತೈಸುವನು. ಚಾರುವಿನ ಸಂಸಾರದಲ್ಲಿ ಎದ್ದಿದ್ದ ಬಿರುಗಾಳಿ ತಿಳಿಯಾಗಿ ತಂಗಾಳಿ ಬೀಸಲಾರಂಭಿಸಿತು. ಅನ್ನ

ಆಹಾರವನ್ನು ತ್ಯಜಿಸಿದ ವಸಂತತಿಲಕೆಯನ್ನು ಕಂಡ ಅನಾಮಿಕೆಯ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಚಾರುದತ್ತನ ಮನೆಯಿಂದ ತರಿಸಿದ ಧನ ಕನಕಗಳನ್ನು ಮರಳಿ ಚಾರುವಿಗೆ ನೀಡುವುದಾಗಿಯೂ, ವಸಂತತಿಲಕೆಯನ್ನು ಚಾರುವಿಗೆ ಒಪ್ಪಿಸುವುದಾಗಿಯೂ ಹೇಳಿ, ಮಗಳ ಮನದ ಇಂಗಿತವನ್ನು ಈಡೇರಿಸಲು ಅನಾಮಿಕೆ ಮುಂದಾದಳು. ಅನಾಮಿಕೆಯ ಈ ಮನ ಪರಿವರ್ತನೆ ನಾಟಕದ ಪ್ರಮುಖ ಘಟ್ಟ. ದೇವಿಲೆಯ ಮನೆಯಲ್ಲಿ ಚಾರುದತ್ತ, ಮಿತ್ರಾವತಿ ವಿರಮಿಸುತ್ತಿರುವಾಗ ಅನಾಮಿಕೆಯು ವಸಂತತಿಲಕೆಯನ್ನು ಅಲ್ಲಿಗೆ ಕರೆತಂದು ನಿಮ್ಮ ವಂಶದ ಕುಡಿಯ ತನ್ನೊಡಲಲ್ಲಿ ಹೊತ್ತಿರುವ ಎನ್ನ ಮಗಳನ್ನು ನಿಮ್ಮ ಎರಡನೇ ಸೊಸೆಯನ್ನಾಗಿ ಮಾಡಿಕೊಳ್ಳಿ ಎಂದು ದೇವಿಲೆಯ ಬಳಿ ಅಂಗಲಾಚುತ್ತಾಳೆ. ವೈಶ್ಯರ ಮನೆಗೆ ವೇಶ್ಯೆ ಸೊಸೆಯಾಗಲು ಹೇಗೆ ಸಾಧ್ಯ? ಇಲ್ಲಿಂದ ಹೊರಡಿ ಎಂದು ದೇವಿಲೆ ಹೇಳಲು ಮಿತ್ರಾವತಿ ಬಂದು ವಸಂತತಿಲಕೆಗೆ ತನ್ನ ಸವತಿಯ ಸ್ಥಾನದ ಹಕ್ಕಿದೆ. ಚಾರು ಬಿತ್ತಿದ ಕಾಳು ಹೊತ್ತು ನಿಂತಿರುವಾಕೆ. ದೈವವೇ ಒಲಿದಿರುವಾಗ ಮನುಷ್ಯರು ತಡೆಯಲು ಸಾಧ್ಯವೇ ಎಂದು ವಸಂತತಿಲಕೆಯನ್ನು ಬಿಗಿದಪ್ಪಿಕೊಳ್ಳುತ್ತಾಳೆ. ತಿಳಿದು ತಿಳಿಯದೆಯೋ ತನ್ನ ಗಂಡನಿಂದಾದ ತಪ್ಪನ್ನು ಸರಿಪಡಿಸಲು ತಾನೇ ನಿಂತು ವಸಂತತಿಲಕೆ ಮತ್ತು ಚಾರುದತ್ತನ ವಿವಾಹವನ್ನು ಮಾಡಿಸುತ್ತಾಳೆ. ಚಾರು ಹಾಗೂ ವಸಂತತಿಲಕೆಯ ಪ್ರೀತಿಯನ್ನು ಗೌರವಿಸಿದ ಮಿತ್ರಾವತಿಯ ಹೃದಯ ವೈಶಾಲ್ಯತೆ ಮೆಚ್ಚುವಂತದ್ದು. ಆದರೆ ಮಿತ್ರಾವತಿಯೇ ತಪ್ಪಿತಸ್ಥಳಾಗಿದ್ದ ಪಕ್ಷದಲ್ಲಿ ಚಾರುದತ್ತ ಇದೇ ರೀತಿಯ ನಿರ್ಧಾರ ತೆಗೆದುಕೊಳ್ಳುತ್ತಿದ್ದನೆ ಅಥವಾ ಸಮಾಜ ಅದನ್ನು ಒಪ್ಪುತ್ತಿತ್ತೇ? ಎಂಬ ಪ್ರಶ್ನೆ ನನ್ನನ್ನು ಸದಾ ಕಾಡುತ್ತದೆ. ಪತಿಯೇ ದೇವರೆಂದು ಪೂಜಿಸುವ ಪತ್ನಿಯನ್ನು ಬಿಟ್ಟು ಪರಸ್ತ್ರೀಯರನ್ನು ಮೋಹಿಸುವ ಪುರುಷರ ಮನಸ್ಥಿತಿಗೆ ಏನೆಂದೆನ್ನಬೇಕೋ? ತಿಳಿಯದು. ಒಟ್ಟಾರೆಯಾಗಿ ಚಾರು ಮತ್ತು ವಸಂತತಿಲಕೆಯ ಪ್ರೀತಿ ಗೆದ್ದಿತು.

ಚಾರುವಿನ ವೈರಾಗ್ಯ

ತದನಂತರದಲ್ಲಿ ಚಾರುದತ್ತ ವ್ಯಾಪಾರಕ್ಕೆಂದು ಹೊರದೇಶಕ್ಕೆ ಸಾಂಬಾರ ಪದಾರ್ಥಗಳೊಂದಿಗೆ ಹೊರಡಲು ಸಜ್ಜಾಗುತ್ತಾನೆ. ಚಂಪಾಪುರವನ್ನು ಬಿಟ್ಟು, ದಟ್ಟ ಅಡವಿಯನ್ನು ದಾಟಿ, ಕಂಜಸ್ಥದುರ್ಗವನ್ನು ತಲುಪುವುದರೊಳಗಾಗಿ ಅಪಾರ ಲಾಭವನ್ನು ಗಳಿಸಿದನು. ಶಂಬರಾವತಿ, ಪೂರ್ಣಯಕ್ಷಿಯರ ಆಶ್ರಮದ ಹಾದಿಯಾಗಿ ರತ್ನದ್ವೀಪದ ದಾರಿಯನ್ನು ಹಿಡಿದು ಶ್ರಮವಹಿಸಿ ಬಂದಂತಹ ಚಾರುದತ್ತನಿಗೆ ಚಾರಣ ಮುನಿ ಹಾಗೂ ಸಿಂಹಗ್ರೀವರ ಭೇಟಿಯಾಗುತ್ತದೆ. ತನ್ನ ಲೌಕಿಕ ಬದುಕಿನ ವೃತ್ತಾಂತವನ್ನೆಲ್ಲ ಚಾರುದತ್ತ ಚಾರಣ ಮುನಿಗೆ ಒಪ್ಪಿಸಿದಾಗ ಭವಮಾಲೆಗೆ ಸಿಲುಕದೆ ಪಾರಾಗುವ ಕಾಲ ದೊರಕುವುದೇ? ಮುಂದೆ ನಿನಗೆ ಒಳಿತಾಗಲಿದೆ ಎಂಬ ಆಶೀರ್ವಚನವನ್ನು ಪಡೆದನು. ಸಿಂಹಗ್ರೀವ ತನ್ನ ಮಗಳಾದ ವಿದ್ಯಾಧರೆಯನ್ನು ಚಾರುದತ್ತನಿಗೆ ದತ್ತು ಕೊಟ್ಟನು. ಸಂತಸದಿಂದ ಚಂಪಾಪುರಕ್ಕೆ ಬಂದಂತಹ ಚಾರುದತ್ತ ಹಾಗೂ ಆತನ ದತ್ತು ಮಗಳಾದ ವಿದ್ಯಾಧರೆಯನ್ನು ಕಂಡು ಸರ್ವರು ಆಶ್ಚರ್ಯಚಕಿತರಾಗಿ ಸಂತೋಷದಿಂದ ಅವರನ್ನು ಬರಮಾಡಿಕೊಳ್ಳುತ್ತಾರೆ. ಅದೇ

ಸಂದರ್ಭದಲ್ಲಿ ಅಲ್ಲಿಗೆ ಬಂದಂತಹ ಮುನಿಗಳೀರ್ವರು ಒಂದು ಕೊಡದ ನೀರನ್ನು ತರಿಸಿ ಅದರಿಂದ ಸ್ವಲ್ಪ ನೀರನ್ನು ಹೊರಗೆ ಪ್ರೋಕ್ಷಿಸಿ ಚಾರುದತ್ತ ಕೊಡದ ನೀರಿನ ಪ್ರಮಾಣವೆಷ್ಟು? ಹಾಗೆಯೇ ಹೊರಗೆ ಹಾಕಿದ ನೀರಿನ ಪ್ರಮಾಣವೆಷ್ಟು? ಎಂದು ಕೇಳಿದಾಗ ಚಾರುವಿಗೆ ಉತ್ತರ ಹೇಳಲಾಗಲಿಲ್ಲ. ಕೊನೆಗೆ ಚಾರುವಿನ ಪಾತ್ರದ ಮೂಲಕ ''ದೇಹವೆಂಬುದು ನಶ್ವರ! ಮುಗಿಯಿತಿಂದಿಗೆ ಧರೆಗೆ ಬಂದ ಕರ್ತವ್ಯ. ರಾಗಭೋಗವು ಮುಗಿದು ವೀತರಾಗದ ಕಡೆಗೆ ಸಜ್ಜನರು ತೋರಿದ ಹೆದ್ದಾರಿಯಲಿ ನನಗೆ ಪಾತ್ರ ಮುಗಿಯಿತು ನಾಟಕ ಜೀವನದೊಳಗೆ'' ಎಂಬ ಮಾತುಗಳನ್ನು ಹೇಳಿಸುತ್ತಾ ನಾಟಕ ಮುಕ್ತಾಯವಾಗುತ್ತದೆ. ಭರತನನ್ನು ಗೆದ್ದ ಬಾಹುಬಲಿ ತಪಸ್ಚರಣಕ್ಕೆ ನಿಶ್ಚಯಿಸಿದ್ದು, ಸಾಮ್ರಾಟ್ ಅಶೋಕ ಯುದ್ಧವಿಮುಖನಾದದ್ದು, ಶ್ರೀನಿವಾಸ ನಾಯಕ ಮತ್ತು ತಿಮ್ಮಪ್ಪ ನಾಯಕ ದಾಸರುಗಳಾದದ್ದು ಭವ ಬಂಧನದಿಂದ ಮುಕ್ತರಾಗಲೆಂದು.

ರಂಗಾನುಭವ

ಕಾವ್ಯವನ್ನು ಓದಿಕೊಂಡು ರಂಗ ಪ್ರಯೋಗವನ್ನು ನೋಡಲು ಹೋದಂತಹ ಪ್ರೇಕ್ಷಕನಿಗೆ ಚಾರುವಸಂತ ನಾಟಕ ಎಂದೂ ಮರೆಯಲಾರದ ಅದ್ಭುತ ಅನುಭವವನ್ನು ನೀಡುತ್ತದೆ ಎಂದರೆ ಅತಿಶಯೋಕ್ತಿಯಲ್ಲ. ಕಾವ್ಯದ ಮೂಲ ಆಶಯಕ್ಕೆ ಎಲ್ಲೂ ಚ್ಯುತಿ ಬರದ ರೀತಿಯಲ್ಲಿ, ನಾಟಕವನ್ನು ಕಟ್ಟಿದಂತಹ ಕೀರ್ತಿ ನಾ. ದಾಮೋದರ ಶೆಟ್ಟಿ ಅವರಿಗೆ ಸಲ್ಲುತ್ತದೆ. ಇಡೀ ನಾಟಕದುದ್ದಕ್ಕೂ ಕಾವ್ಯಾತ್ಮಕ ಭಾಷೆಯನ್ನು ಬಳಸಿಕೊಂಡಿರುವುದು ರಂಗ ಪ್ರಯೋಗದ ವಿಶೇಷತೆ. ಒಂದು ರಂಗಪಠ್ಯವನ್ನು ರಂಗದ ಮೇಲೆ ಪ್ರಸ್ತುತ ಪಡಿಸುವುದು ಸಾಧಾರಣವಾದ ಕೆಲಸವಲ್ಲ. ಹತ್ತಾರು ನಟ ನಟಿಯರನ್ನು ಸೇರಿಸಿ ರಂಗ ಪ್ರಯೋಗವನ್ನು ತಯಾರಿಸುವುದು ಒಂದು ಸಾಹಸದ ವಿಚಾರವೇ ಸರಿ. ಮೊದಲಿಗೆ ನಾಟಕ ಪಠ್ಯದ ವಾಚನವನ್ನು ಮಾಡಿ, ಸರಿಯಾದ ಪಾತ್ರಧಾರಿಗಳನ್ನು ಆರಿಸಿ, ಪಾತ್ರಧಾರಿಗಳಿಗೆ ಸಂಭಾಷಣೆ ಸರಿ ಹೊಂದುತ್ತಿದೆಯೇ? ಇಲ್ಲವೇ? ಎಂದು ಗಮನಿಸಿ ಪ್ರತಿನಿತ್ಯ ತಾಲೀಮು ನಡೆಸಿ, ಇಡೀ ತಂಡವನ್ನು ನಿರ್ವಹಿಸಿ, ಸರಿ ತಪ್ಪುಗಳನ್ನು ತಿದ್ದಿ, ಪ್ರದರ್ಶನ ಮುಗಿಸುವ ಪಯಣ ಸುದೀರ್ಘವಾದದ್ದು. ಕವಿ ಅಥವಾ ನಾಟಕಕಾರನ ಭಾವ ಭಿತ್ತಿಯಲ್ಲಿ ಅರಳಿದ ಅನೇಕ ಕಲ್ಪನೆಗಳಿಗೆ ನಿರ್ದೇಶಕ ಜೀವ ತುಂಬುವಂತೆ ಅಭಿನಯಿಸುವ ತರಬೇತಿಯನ್ನು ನೀಡಿರುತ್ತಾನೆ. ರಂಗದ ಮೇಲೆ ನಿಂತು ತನ್ನ ಪಾತ್ರಕ್ಕೆ ನ್ಯಾಯ ಒದಗಿಸುವ ನಟ ನಟಿಯರ ಕರ್ತವ್ಯನಿಷ್ಠೆ ಅಪರಿಮಿತವಾದದ್ದು. ಪ್ರೇಕ್ಷಕನ ಭಾವನೆಗಳನ್ನು ಬದಲಾಯಿಸಿ, ಅವರಿಗೆ ರಸಾನುಭವವನ್ನುಂಟು ಮಾಡುವ ಪಾತ್ರಧಾರಿಗಳಿಗೆ ಏನನ್ನಿತ್ತರೂ ಕಡಿಮೆಯೇ. ಇಡೀ ನಾಟಕದ ರಂಗಸಜ್ಜಿಕೆಯು ಸಹಜ ಸುಂದರವಾಗಿತ್ತು. ಅರಮನೆ, ವೇಶ್ಯಾಗೃಹ, ಆಶ್ರಮ, ಬಾವಿ, ಉಡ, ಪುಷ್ಪಕ ವಿಮಾನ, ಕಾಡು ಸೇರಿದಂತೆ ದೃಶ್ಯದಿಂದ ದೃಶ್ಯಕ್ಕೆ ಬದಲಾಗುವ ರಂಗ ಪರಿಕರಗಳ ಬಳಕೆಯಂತೂ ವಿಸ್ಮಯಕಾರಿಯಾದದ್ದು. ರಂಗಸಂಗೀತವಂತೂ ಪ್ರೇಕ್ಷಕ ಮಹಾಪ್ರಭುವನ್ನು ತಲೆದೂಗುವಂತೆ ಮಾಡಿಬಿಟ್ಟಿತ್ತು. ಬೆಳಕಿನ ವಿನ್ಯಾಸ, ವಸ್ತ್ರ ವಿನ್ಯಾಸ ಹಾಗೂ ಪ್ರಸಾದನವು ಬಹಳ ಅಚ್ಚುಕಟ್ಟಾಗಿತ್ತು. ಆಳ್ವಾಸ್ ರಂಗ ಅಧ್ಯಯನ ಕೇಂದ್ರ ಚಾರುವಸಂತ ರಂಗ ಪ್ರಯೋಗವನ್ನು ನಿರ್ಮಿಸಿತ್ತು.

ಒಟ್ಟಾರೆಯಾಗಿ ಚಾರುವಸಂತ ನಾಟಕ ಹಲವಾರು ಪರಿವರ್ತನೆಗಳ ಸಾರ ಸಂಗ್ರಹವಾಗಿದ್ದು, ಸಾರ್ವಕಾಲಕ್ಕೂ ಒಪ್ಪುವಂತದ್ದಾಗಿದೆ.

ಉಪಸಂಹಾರ

ಸಾಂಸ್ಕೃತಿಕ ಮೌಲ್ಯಗಳು ಒಂದು ಸಮಾಜವನ್ನು ಗುರುತಿಸಿಕೊಳ್ಳಲು ಮತ್ತು ಉಳಿಸಿಕೊಳ್ಳಲು ಬೇಕಾದಂತಹ ಸಾಧನಗಳಾಗಿವೆ. ಸಾಹಿತ್ಯ ಮತ್ತು ಪ್ರಯೋಗಗಳು ಅವುಗಳನ್ನು ಜೀವಂತವಾಗಿ ಪ್ರೇಕ್ಷಕರಿಗೆ ತಲುಪಿಸುವ ಕಾರ್ಯವನ್ನು ಮಾಡುತ್ತವೆ. ಚಾರುವಸಂತ ನಾಟಕವು ಕೇವಲ ಕಥೆಯನ್ನು ನಿರೂಪಿಸುವ ಕೃತಿಯಾಗಿರದೆ ಅದರೊಳಗೆ ಭಾರತೀಯ ಹಾಗೂ ಕನ್ನಡ ಸಂಸ್ಕೃತಿಯ ವಿವಿಧ ಮೌಲ್ಯಗಳು, ಜೀವನ ಕ್ರಮಗಳು, ನಂಬಿಕೆಗಳು, ಸಂಬಂಧಗಳು ಮತ್ತು ಕಲಾ ಪರಂಪರೆಗಳು ಪ್ರತಿಫಲಿಸುವ ಕೃತಿಯಾಗಿ ಗಮನಿಸಬಹುದು. ನಾಟಕದ ಪ್ರಯೋಗದಲ್ಲಿ ಭಾಷೆ, ವೇಷಭೂಷಣ, ಸಂಗೀತ, ಅಭಿನಯ, ಆಚರಣೆಗಳು ಮತ್ತು ದೃಶ್ಯ ವಿನ್ಯಾಸಗಳು ಸಾಂಸ್ಕೃತಿಕ ಅರ್ಥವನ್ನು ಮತ್ತಷ್ಟು ಗಾಢಗೊಳಿಸುತ್ತದೆ. ಚಾರುವಸಂತದ ರಂಗ ಪ್ರಯೋಗದಲ್ಲಿ ಹಲವು ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳಾದ ಜಾತಿ ಆಧಾರಿತ ಅಸಮಾನತೆ, ಮನುಷ್ಯನ ಘನತೆಯ ಪ್ರತಿಪಾದನೆ, ಸ್ತ್ರೀಯ ತ್ಯಾಗ ಮತ್ತು ಸಹನೆ, ಪ್ರೀತಿ, ದಾಂಪತ್ಯದ ಸಂಕೀರ್ಣತೆ, ಸಂಪತ್ತು ಮತ್ತು ಭೋಗದ ಪರಿಣಾಮ, ಪಶ್ಚಾತಾಪ ಮತ್ತು ಆತ್ಮ ಪರಿಶೀಲನೆ, ವೈರಾಗ್ಯ ಮತ್ತು ಜೀವನದ ಅನಿತ್ಯತೆ ಇತ್ಯಾದಿ ವಿಷಯಗಳು ಅಡಕವಾಗಿವೆ. ಹೀಗಾಗಿ ಚಾರುವಸಂತ ಕೇವಲ ಪೌರಾಣಿಕ ಅಥವಾ ಪ್ರೇಮ ಕಥೆಯ ರಂಗ ರೂಪವೆಂದು ಮಾತ್ರ ಪರಿಗಣಿಸಲು ಸಾಧ್ಯವಿಲ್ಲ. ಅದರೊಳಗೆ ಚಿರಂತರ ಮೌಲ್ಯಗಳ ಅಖಂಡ ಜೀವನ ದರ್ಶನದ ಸಹಜ ಸಂವೇದನೆಯ ಆಶಯವಿದೆ. ಚಾರುವಸಂತದ ರಂಗ ಪ್ರಯೋಗವು ಮಹಾಕಾವ್ಯದ ಸಾಹಿತ್ಯಿಕ ಆಶಯಗಳಿಗೆ ದೃಶ್ಯ ಮತ್ತು ಶ್ರವ್ಯ ಆಯಾಮವನ್ನು ನೀಡುವುದರೊಂದಿಗೆ ಪ್ರೇಕ್ಷಕನ ಅರಿವನ್ನು ಸಹ ವಿಸ್ತರಿಸುತ್ತದೆ.

ಆಕರ ಗ್ರಂಥಗಳು:

1. ಹಂಪಾ ನಾಗರಾಜಯ್ಯ, (2021), ಚಾರುವಸಂತ ಕಾವ್ಯ, ಬೆಂಗಳೂರು: ಸ್ವಪ್ನ ಬುಕ್ ಹೌಸ್.
2. ದಾಮೋದರ ಶೆಟ್ಟಿ ನಾ., (2024), ಚಾರು ವಸಂತ ನಾಟಕ, ಬೆಂಗಳೂರು: ಬಹುರೂಪಿ ಪ್ರಕಾಶನ.

ಪರಾಮರ್ಶನ ಗ್ರಂಥಗಳು:

1. ಅಕ್ಷರ ಕೆ.ವಿ., (1994), ರಂಗಪ್ರಪಂಚ, ದೆಹಲಿ: ನ್ಯಾಷನಲ್ ಬುಕ್ ಟ್ರಸ್ಟ್.
2. ರಂಗನಾಥ್ ಎಚ್. ಕೆ., (1978), ಕರ್ನಾಟಕ ರಂಗಭೂಮಿ, ಬೆಂಗಳೂರು: ಹೇಮಂತ ಸಾಹಿತ್ಯ ಪ್ರಕಾಶನ.
3. ಅಕ್ಷರ ಕೆ.ವಿ., (1994), ರಂಗಪ್ರಯೋಗ, ಹೆಗ್ಗೋಡು: ಅಕ್ಷರ ಪ್ರಕಾಶನ.